**ಸಿಸಿ ಸಂಖ್ಯೆಃ 1053/2020 ಡಿಡಬ್ಲೂಃ1**

**ದಿನಾಂಕ 26-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಫಿರ್ಯಾದಿ ಪರ ವಕೀಲರಿಂದ**

ನ್ಯಾಯಾಲಯದಲ್ಲಿರುವ 5 ಪ್ರಕರಣಗಳು ಮತ್ತು ಮಾರುಕಟ್ಟೆಯಲ್ಲಿರುವ ಇತರ ವ್ಯಾಪಾರಿಗಳಿಗೆ ಹಣ ಕೊಡದೇ ನಮ್ಮ ಸಂಸ್ಥೆಯನ್ನು ಮುಚ್ಚಿರುತ್ತೇವೆ ಎಂದರೆ ನಿಜ. ಇಟಗಿ ಗ್ರಾಮದಲ್ಲಿ ನನ್ನ ಒಟ್ಟು ಕುಟುಂಬದ 115 ಎಕರೆ ಜಮೀನು ಇದೆ ಎಂದರೆ ಸರಿ ಅಲ್ಲ. ಇಟಗಿ ಗ್ರಾಮದ ಆಸ್ತಿಯನ್ನು ಕೊಡದೇ ಸಂಸ್ಥೆ ಹೆಸರಿನಲ್ಲಿರುವ ಆಸ್ತಿಗಳನ್ನು ಮಾತ್ರ ಒಕ್ಕೂಟಕ್ಕೆ ವಹಿಸಿಕೊಟ್ಟಿರುತ್ತೇವೆ ಎಂದರೆ ಸರಿ ಅಲ್ಲ. ಗೋವಿನಜೋಳವನ್ನು ಮೊದಲು ಬೇರೆ ರಾಜ್ಯಗಳಿಗೂ ಕಳುಹಿಸಿಕೊಡುತ್ತಿದ್ದೆವು ಎಂದರೆ ನಿಜ. ಹೊರರಾಜ್ಯಗಳಿಗೆ ನಾವು ವಸ್ತುಗಳನ್ನು ಕೊಟ್ಟಾಗ ನಮ್ಮ ಬಿಲ್ಲಿನ ರಶೀದಿಗಳ ಮೇಲೆ ಸಹಿ ಪಡೆಯುತ್ತಿರಲಿಲ್ಲ.

ನಾನು ಕಾರ್ಪೊರೇಷನ್ ಬ್ಯಾಂಕ್ ಮತ್ತು ಯೂನಿಯನ್ ಬ್ಯಾಂಕಿಗೆ ಚೆಕ್ಕು ಕಳೆದು ಹೋಗಿವೆ ಎಂದು ಅರ್ಜಿ ಕೊಟ್ಟಿದ್ದು ಇದೆ. ಆದರೆ ಆ್ಯಕ್ಸಿಸ್ ಬ್ಯಾಂಕ್‌ಗೆ ಯಾವುದೇ ಅರ್ಜಿ ಕೊಟ್ಟಿಲ್ಲ ಎಂದರೆ ಸರಿ ಅಲ್ಲ. ಅದು ಕಳೆದು ಹೋಗಿವೆ ಎಂದು ಹೇಳುತ್ತಾರೆ. ನಾನು ಸಂಸ್ಥೆಯಲ್ಲಿ ದಿನನಿತ್ಯ ಕೆಲಸ ಮಾಡುತ್ತಿದ್ದರಿಂದ ಸಂಪೂರ್ಣವಾಗಿ ಅದನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ನಿಜ.

ದಿನಾಂಕ 01-04-2019 ಕ್ಕಿಂತ ಹಿಂದೆ ಖರೀದಿಸಿದ ಬಾಕಿ ರೂ.3,38,937.19/- ಎಂದು ತೋರಿಸುತ್ತದೆ ಎಂದರೆ ಆ ಹಿಂದಿನ ಎಲ್ಲ ಹಣವನ್ನು ಕೊಟ್ಟಿರುತ್ತೇನೆ ಯಾವುದೇ ಬಾಕಿ ಇರುವುದಿಲ್ಲ. ನಾನು ಈ ಮೊದಲು ಫಿರ್ಯಾದಿ ಸಂಸ್ಥೆಯೊಂದಿಗೆ ವ್ಯವಹಾರ ಮಾಡಿರುತ್ತೇನೆ. ನಾನು ಕಳೆದ 15 ವರ್ಷಗಳಿಂದ ವ್ಯವಹಾರ ಮಾಡುತ್ತ ಬಂದಿರುತ್ತೇನೆ. ಸದ್ರಿ ವ್ಯವಹಾರದ ಹಣವನ್ನು ಸ್ವಂತಕ್ಕೆ ಉಪಯೋಗಿಸಿ ಈಗ ನಷ್ಟ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಯಾವುದೇ ದೂರನ್ನು ಪೊಲೀಸ್ ಠಾಣೆಗೆ ಕೊಟ್ಟಿಲ್ಲ ಎಂದರೆ ಸರಿ ಅಲ್ಲ ಕೊಟ್ಟಿರುತ್ತೇನೆ ಆದರೆ ನೋಂದು ಆಗಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು ಯೂನಿಯನ್‌ದವರು ರಚಿಸಿದ ಕಮಿಟಿಯಲ್ಲಿ ಫಿರ್ಯಾದಿ ಕೂಡ ಒಬ್ಬರಾಗಿರುತ್ತಾರೆ ಎಂದು ಹೇಳುತ್ತಾರೆ.

ಈಗ ತೋರಿಸಲಾದ ನಿಪಿ-1 ಚೆಕ್ಕು ನನ್ನದು ಆದರೆ ಅದರ ಮೇಲಿರುವ ಸಹಿ

ನನ್ನದಲ್ಲ. ದಿನಾಂಕ 24-06-2019 ರಂದು ಮೆಕ್ಕೆಜೋಳ ಬೇಕು ಎಂದು ಫೋನ್ ಮೂಲಕ ಫಿರ್ಯಾದಿಗೆ ಕೇಳಿರುತ್ತೇನೆ ಎಂದರೆ ಸರಿ ಅಲ್ಲ. ಕಾರಣ ಜೂನ್ ಮೊದಲನೇ ವಾರದಲ್ಲಿ ನಮ್ಮ ಅಂಗಡಿ ಬಂದಾಗಿತ್ತು ಎಂದು ಹೇಳುತ್ತಾರೆ. ನಮಗೆ ಬೇಕು ಎಂದು ಹೇಳಿದ್ದರಿಂದ ಇನ್ವೈಸ್ ನಂಬ್ರ 217, 218 ರ ಪ್ರಕಾರ 2 ಲಾರಿ ಜೋಳವನ್ನು ನಮಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಈ ಎರಡು ಲಾರಿ ಮಾಲಿನ ಪೈಕಿ 12 ಲಕ್ಷ ರೂಪಾಯಿ ಬಾಕಿ ಕೊಡುವುದು ಇದೆ ಎಂದರೆ ಸರಿ ಅಲ್ಲ. ಒಂದು ತಿಂಗಳು ಆದ ನಂತರ ಆ್ಯಕ್ಸಿಸ್ ಬ್ಯಾಂಕಿನ ನಿಪಿ-1 ಚೆಕ್ಕನ್ನು ಫಿರ್ಯಾದಿ ಕೊಟ್ಟಿರುತ್ತೇನೆ ಎಂದರೆ ಸರಿ ಅಲ್ಲ. ನಾನು ಹಣ ಕೊಡಬೇಕಾಗುತ್ತದೆ ಎಂದು ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.)**

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರು.**

**ಸಾಕ್ಷಿದಾರರ ಸಹಿಃ**